# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1321 |
| ಸದಸ್ಯರ ಹೆಸರು | ಡಾ|| ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 22-08-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯಲ್ಲಿ ಈ ವರ್ಷ ತೊಗರಿ ಬೆಳೆ ಹಿಂದಿನ ಮೂರು ವರ್ಷಕ್ಕಿಂತ ಕಡಿಮೆಯಾಗಿ ಬೆಳೆ ಕುಸಿದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಕಲಬುರಗಿ ಜಿಲ್ಲೆಯಲ್ಲಿ ಈ ವರ್ಷ ಅಂದಾಜು 606191 ಹೆಕ್ಟೇರ್ ವಿಸ್ತೀರ್ಣದಲ್ಲಿ ತೊಗರಿ ಬೆಳೆ ಬಿತ್ತನೆಯಾಗಿರುತ್ತದೆ.<br><br>ಈ ವಿಸ್ತೀರ್ಣವು ಕಳೆದ ಮೂರು ವರ್ಷದ ಸರಾಸರಿ ವಿಸ್ತೀರ್ಣಕ್ಕೆ (564531 ಹೆ.) ಹೋಲಿಸಿದಲ್ಲಿ ಕಡಿಮೆಯಾಗಿರುವುದಿಲ್ಲ, ಆದರೆ ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ವಿಸ್ತೀರ್ಣವು ಕಡಿಮೆಯಾಗಿರುವುದು ಕಂಡು ಬಂದಿರುತ್ತದೆ.<br><br>ಮುಂಗಾರು ಹಂಗಾಮಿನ ಕಲಬುರಗಿ ಜಿಲ್ಲೆಯ ವರ್ಷವಾರು ತೊಗರಿ ಬೆಳೆಯ ಬಿತ್ತನೆಯಾದ ವಿಸ್ತೀರ್ಣ ಈ ಕೆಳಕಂಡಂತಿದೆ.<br><br><table><tr><th>ಕ್ರ.ಸಂ.</th><th>ವರ್ಷ</th><th>ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th></tr><tr><td>1</td><td>2022-23</td><td>486238</td></tr><tr><td>2</td><td>2023-24</td><td>577430</td></tr><tr><td>3</td><td>2024-25</td><td>629925</td></tr><tr><td>4</td><td>2025-26 (12.08.2025 ರವರೆಗೆ)</td><td>606191</td></tr></table><br>(ಮೂಲ: 2022-23 ರಿಂದ 2024-25 ರವರೆಗೆ ಬೆಳೆ ಸಮೀಕ್ಷೆ ವರದಿಯನ್ವಯ, 2025-26 ಸಾಲಿನ ಜಿಲ್ಲೆಯ ವರದಿಯನ್ವಯ.)</td></tr>
<tr><td>ಆ)</td><td>ರೂ.12700/- ಪ್ರತಿ ಕ್ವಿಂಟಾಲ್ ಗೆ ಇದ್ದ ಬೆಲೆ ರೂ.5000/-ಕ್ಕೆ ಕುಸಿದಿದ್ದು ದಾಲ್ಲಾಳಿಗಳು ರೈತರಿಗೆ ಮೋಸ ಮಾಡುತ್ತಿರುವುದನ್ನು ಸರ್ಕಾರ ತಡೆಯಲು ಕೈಗೊಂಡ ಕ್ರಮಗಳೇನು;</td><td>ರಾಜ್ಯ ಸರ್ಕಾರವು ತೊಗರಿ ಬೆಳೆಯನ್ನು 2025-26ನೇ ಸಾಲಿಗೆ ಕ್ವಿಂಟಾಲ್‌ಗೆ ರೂ. 8000/- ರಂತೆ ಖರೀದಿ ಮಾಡುತ್ತದೆ. ಇದರಲ್ಲಿ ರೂ. 7450/-ಗಳು ಕೇಂದ್ರ ಸರ್ಕಾರದಿಂದ ಹಾಗೂ ನಮ್ಮ ರಾಜ್ಯ ಸರ್ಕಾರದಿಂದ ಕ್ವಿಂಟಾಲ್‌ಗೆ ರೂ. 450/- ರಂತೆ ಖರೀದಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಕಳೆದ ಸಾಲು 2024-25 ರಲ್ಲಿ ನಮ್ಮ ಸರ್ಕಾರ 3.1ಲಕ್ಷ ಮೆಟ್ರಿಕ್ ಟನ್ ತೊಗರಿಯನ್ನು ಪ್ರತಿ ರೈತನಿಂದ ಗರಿಷ್ಠ 40 ಕ್ವಿಂಟಾಲ್‌ನಂತೆ ರಾಜ್ಯದ 516 ಖರೀದಿ ಕೇಂದ್ರಗಳ ಮೂಲಕ ಖರೀದಿಸಲಾಗಿದೆ.</td></tr>
</table>

| | | |
|---|---|---|
| | | 2025-26 ರಲ್ಲಿ ತೊಗರಿ ಬೆಳೆಯು ರಾಷ್ಟ್ರದಲ್ಲಿ ಆಮದು ಮಾಡಿಕೊಳ್ಳದೇ ಇರುವುದರಿಂದ ಸ್ಥಿರವಾಗಿತ್ತು. ಈ ವರ್ಷ ಕೇಂದ್ರ ಸರ್ಕಾರದಿಂದ ತೊಗರಿಯನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ತೊಗರಿ ಬೆಲೆಯು ಕುಸಿತ ಕಂಡಿರುತ್ತದೆ. ಆದಾಗ್ಯೂ, ನಮ್ಮ ಸರ್ಕಾರ ಕ್ವಿಂಟಾಲ್‌ಗೆ ರೂ. 8000/- ರಂತೆ ಖರೀದಿಸಿ ರೈತರ ನೆರವಿಗೆ ಬರುತ್ತಿದೆ. |
| ಇ) | ಜಿಲ್ಲೆಯ ತೊಗರಿ ಬೆಳೆಗಾಗರಿಗೆ ಉತ್ತೇಜನ ಮತ್ತು ಬೆಂಬಲ ನೀಡಲು ಸ್ಥಾಪನೆಯಾದ ತೊಗರಿ ಮಂಡಳಿ ರೋಗಗ್ರಸ್ತವಾಗಿದ್ದು ಅದನ್ನು ಸುಧಾರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; | ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯು ಸ್ಥಾಪನೆಯಾದಾಗಿನಿಂದಲೂ ಬೆಂಬಲ ಬೆಲೆ ಯೋಜನೆಯಡಿ ದ್ವಿದಳ ದಾನ್ಯಗಳನ್ನು ರೈತರಿಂದ ನೇರವಾಗಿ ಖರೀದಿಸಲಾಗುತ್ತಿದ್ದು, ಪ್ರಸ್ತುತ 2024-25ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಹೆಸರು ಕಾಳು 747 ರೈತರಿಂದ 4811.50 ಕ್ವಿಂಟಾಲ್ ಹಾಗೂ 13,597 ರೈತರಿಂದ 2,05,803 ಕ್ವಿಂಟಾಲ್ ತೊಗರಿಯನ್ನು ಖರೀದಿಸಲಾಗಿದೆ.<br>ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಗೆ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಬೆಳೆಯುವ ಭೌಗೋಳಿಕ ಸೂಚ್ಯಂಕ ಹೊಂದಿದ ತೊಗರಿ ಬೇಳೆಯನ್ನು GI ಅಡಿಯಲ್ಲಿ ಖರೀದಿಸಿ, "ಭೀಮಾ ಪಲ್ಸಸ್" ಬ್ರಾಂಡ್ ನಡಿ ಮಾರಾಟ ಮಾಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>ದ್ವಿದಳ ಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಾಗಿ ಘಟಕ ನಿರ್ಮಿಸಲಾಗುತ್ತಿದೆ.<br>ದ್ವಿದಳ ಧಾನ್ಯಗಳ ಸಂಗ್ರಹಣೆಗಾಗಿ 100 ಮೆಟ್ರಿಕ್ ಟನ್ ಸಾಮರ್ಥ್ಯದ 2 ಗೋದಾಮುಗಳನ್ನು ನಿರ್ಮಿಸಲಾಗುತ್ತಿದೆ. |
| ಈ) | ತೊಗರಿ ಬೆಳೆಯಲು ಸಾಕಷ್ಟು ಖರ್ಚು ಮಾಡುವ ರೈತರು, ಸರ್ಕಾರ ಕೊಡುವ ಬೆಂಬಲ ಬೆಲೆ ಮತ್ತು ಪ್ರೋತ್ಸಾಹ ಧನ ಸರಿಯಾಗಿ ಬಳಸಿಕೊಳ್ಳುವ ಸ್ಥಿತಿಯಲ್ಲಿ ಕಲಬುರ್ಗಿ ರೈತರು ಇಲ್ಲದೆ ಇರುವುದರಿಂದ ಸರ್ಕಾರ ಪರಿಹಾರವಾಗಿ ಹಾಕಿಕೊಂಡ ಜಾಗೃತಿ ಕಾರ್ಯಕ್ರಮಗಳು ಯಾವುವು; | 2025-26ನೇ ಸಾಲಿನಲ್ಲಿ ಮುಂಗಾರು ಹಂಗಾಮಿಗೆ ಅಧಿಕ ಮಳೆಯಾಗಿರುವ ಕಾರಣ ಕಲಬುರಗಿ ಜಿಲ್ಲೆಯಲ್ಲಿ ತೊಗರಿ ಬೆಳೆ ಹಾನಿಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅದ್ದರಿಂದ, ತಕ್ಷಣವೇ ಕೃಷಿ ಹಾಗೂ ಕಂದಾಯ ಇಲಾಖೆಯಿಂದ ಜಂಟಿ ಬೆಳೆ ಹಾನಿ ಸಮೀಕ್ಷೆ ಮಾಡಿಸಿ ಎನ್.ಡಿ.ಆರ್.ಎಫ್/ಎಸ್.ಡಿ.ಆರ್.ಎಫ್ ಮಾರ್ಗಸೂಚಿಗಳ ಪ್ರಕಾರ ಪರಿಹಾರ ಒದಗಿಸಲು ಕ್ರಮಕೈಗೊಳ್ಳಲಾಗುವುದು.<br>ಇದಲ್ಲದೇ 2024-25ನೇ ಸಾಲಿನಲ್ಲಿ 1.70 ಲಕ್ಷ ತೊಗರಿ ಬೆಳೆಗಾರರು ಬೆಳೆವಿಮೆ ಯೋಜನೆಯಲ್ಲಿ ನೊಂದಾಯಿಸಿಕೊಂಡಿದ್ದು, ಪ್ರಥಮ ಬಾರಿಗೆ ಜಿಲ್ಲೆಯಲ್ಲಿ ಗರಿಷ್ಠ 630 ಕೋಟಿ ರೂಗಳಷ್ಟು ಬೆಳೆವಿಮೆ ಪರಿಹಾರ ನೀಡಲಾಗುತ್ತಿದ್ದು, ಈಗಾಗಲೇ 315 ಕೋಟಿ |

| | | |
|---|---|---|
| | | ಬಿಡುಗಡೆಯಾಗಿದೆ. ಇದರಂತೆ 2025-26ನೇ ಸಾಲಿನಲ್ಲಿ ಕೂಡ ಕಲಬುರಗಿ ಜಿಲ್ಲೆಯಲ್ಲಿ ವಿವಿಧ ಮುಂಗಾರು ಬೆಳೆಗಳಲ್ಲಿ 3 ಲಕ್ಷ ರೈತರು ಬೆಳೆವಿಮೆ ಯೋಜನೆಯಲ್ಲಿ ನೊಂದಾಯಿಸಿಕೊಂಡಿದ್ದು, ಇವರಿಗೂ ಕೂಡ ಬೆಳೆವಿಮೆ ಪರಿಹಾರದ ಮಾರ್ಗಸೂಚಿಯಂತೆ ಮುಂದಿನ ದಿನಗಳಲ್ಲಿ ರೈತರಿಗೆ ಬೆಳೆವಿಮೆ ಪರಿಹಾರ ನೀಡಲು ಕ್ರಮ ಜರುಗಿಸಲಾಗುವುದು. |
| ಉ) | ಉತ್ಕೃಷ್ಟ ತೊಗರಿ ಬೆಳೆಯುವ ಕಲಬುರಗಿ ಜಿಲ್ಲೆಗೆ ಒಂದು ಬ್ರ್ಯಾಂಡಿಂಗ್ (GI ಟ್ಯಾಗ್) ಹಂತಕ್ಕೆ ಒಯ್ದು ರೈತರ ಬದುಕಿಗೆ ಆಧಾರವಾಗಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ? | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ರೈತರಿಂದ ಭೌಗೋಳಿಕ ಸೂಚ್ಯಂಕ (GI) ಅಡಿಯಲ್ಲಿ ಪ್ರಮಾಣೀಕರಿಸಲಾದ ತೊಗರಿ ಖರೀದಿಸಿ, ಅವುಗಳ ಸಂಸ್ಕರಣೆ ಮಾಡಿ ಭೀಮಾ ಪಲ್ಸ್‌ಸ್ ಎಂಬ ಬ್ರ್ಯಾಂಡ್ ಹೆಸರಿನಲ್ಲಿ ಮಾರ್ಕೆಟಿಂಗ್ ಮಾಡುವ ಮೂಲಕ ಜನಪ್ರಿಯಗೊಳಿಸುವ ಉದ್ದೇಶ ಹೊಂದಿದೆ. |

ಸಂಖ್ಯೆ: AGRI/279/ACT/2025

(ಎನ್. ಚಲುವರಾಯಸ್ವಾಮಿ)

ಕೃಷಿ ಸಚಿವರು